ಜನ-ಪದ

# ಎಲ್ಲೆಲ್ಲು ಆನಂದವೇ...

**ಆನಂದ ವಿ. ಪಾಟೀಲ** (ಜ.1, 1955) ಆಕಾಶವಾಣಿಯಲ್ಲಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದವರು, ಇದೀಗ ನಿವೃತ್ತರು. ಹೆಸರಿನಲ್ಲಿನ ಆನಂದವನ್ನು ಮಕ್ಕಳಿಗೆ ಹಂಚುವುದರಲ್ಲಿ ನಿರತರು. ಕಥೆ, ಕವಿತೆ, ಕಾದಂಬರಿ – ಮಕ್ಕಳಿಗೆ ರುಚಿಸಬಹುದಾದ ಎಲ್ಲವನ್ನೂ ಬರೆಯುತ್ತ ಬರೆಯುತ್ತ ಮಗುವೇ ಆದವರು.

ಬರವಣಿಗೆ ಮಾತ್ರವಲ್ಲ, ಅಕ್ಷರಗಳಿಗೆ ಚಿತ್ತಾರದ ಕಸಿ ಮಾಡುವ ಅಲಂಕಾರಕಲೆಯಲ್ಲೂ ಪಳಗಿದವರು. ತಮ್ಮ ರಚನೆಗಳಿಗೆ ಮಾತ್ರವಲ್ಲ; ಇತರ ಲೇಖಕರ ಮಕ್ಕಳ ಬರಹಗಳಿಗೂ ರೇಖಾಚಿತ್ರಗಳನ್ನು ಬಿಡಿಸಿಕೊಡುವ ಸಹೃದಯರು. ಬರೆದದ್ದೆಷ್ಟು ಮುನ್ನುಡಿ ತೋರಣ, ಬೆನ್ನುಡಿ ಅಲಂಕರಣ – ಲೆಕ್ಕ ಇಟ್ಟವರಾರು?

'ಅಜ್ಜಿ ಮನೆ ಬಹಳ ದೂರ', 'ಹಕ್ಕಿ ಪುಟಾಣಿ', 'ಹೂ ಅಂದ್ರ ಹೂ', 'ಅಜ್ಜಿ ಬಿಡಿಕಾಳ್ ಬಿಡಿಕಾಳು', 'ಪುಟ್ಟ ಪುಟ್ಟ ಪಾಪು ಪುಟಾಣಿ ಪಾಪು', 'ಪುಟ್ಟನ ಹಾವು ಹುತ್ತ ಬಿಟ್ಟು ಹೊರಗೆ ಬಂತು', 'ಪುಟ್ಟಕ್ಕನ ಪತ್ರಗಳು', 'ಬೆಳದಿಂಗಳು', 'ಡಂ ಡಂ ಊರಿಗೆ ಡಿಂ ಡಿಂ ಗಾಡಿ', 'ಖಾಲಿ ಕಡ್ಡಿಪೆಟ್ಟಿಗೆ ಮತ್ತು ಬೆಳಕಿಂಡಿ', 'ಮತ್ತೆ ಬಂತು ಚಂಪೂ' – ಹೀಗೆ ಬೆಳೆಯುತ್ತದೆ ಅವರ ಕೃತಿಪಟ್ಟಿ. ಅವರ ಮಕ್ಕಳ ಸಾಹಿತ್ಯ ಕೃಷಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳು ಸಂದಿವೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪುರಸ್ಕಾರವೂ ಪಾಟೀಲರಿಗೆ ಸಲ್ಲುವ ಮೂಲಕ ಸಾರ್ಥಕತೆ ಪಡೆದಿದೆ.



ಕನ್ನಡ ಸಾಹಿತ್ಯದಲ್ಲಿ ಮಕ್ಕಳಿಗಾಗಿ ಬರೆದ ಹಿರಿಯರದೊಂದು ಪರಂಪರೆಯಿದೆ. ಕುವೆಂಪು, ಪಂಜೆ, ಕಾರಂತ, ರಾಜರತ್ನಂರಿಂದ ಪಳಕಳ, ಎಚ್ಚೆಸ್ವಿ, ತಿರುಮಲೇಶರವರೆಗೆ ಮಕ್ಕಳಿಗಾಗಿ ಪ್ರೀತಿಯಿಂದ ಬರೆದವರ ಸಾಲು ದೊಡ್ಡದು. ಈ ಪಾಳಿಯಲ್ಲಿ ಪಾಟೀಲರು ಪ್ರಮುಖರಷ್ಟೇ ಅಲ್ಲ; ಭಿನ್ನವೂ ಹೌದು. ಮಕ್ಕಳಿಗಾಗಿ ಬರೆದ ಹಿರಿಯರಿಗೆ, 'ಮಕ್ಕಳ ಸಾಹಿತ್ಯ' ಎನ್ನುವುದು ಅವರ ಅಗಾಧ ಸಾಹಿತ್ಯಸೃಷ್ಟಿಯ ಉಪ ಉತ್ಪನ್ನವಷ್ಟೇ. ಮಕ್ಕಳ ಸಾಹಿತ್ಯ ರಚನೆಗಷ್ಟೇ ತಮ್ಮನ್ನು ಮೀಸಲಾಗಿಸಿಕೊಂಡವರೂ ಇದ್ದಾರೆ. ಅಂಥವರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪೇಟೆಬೀದಿಯಿಂದ ಒತ್ತರಿಸಲ್ಪಟ್ಟು, ಓಣಿಗಳಲ್ಲಿಯೇ ಉಳಿದಿದ್ದಾರೆ. ಆನಂದ ಪಾಟೀಲರು ಕೂಡ ತಮ್ಮ ಲೇಖನಿಯನ್ನು ಮಕ್ಕಳಿಗಾಗಿಯೇ ಮುಡಿಪಾಗಿಟ್ಟವರು. ಕನ್ನಡ ಸಾಹಿತ್ಯ ವಿಮರ್ಶಕಗಡಣ ಗಂಭೀರವಾಗಿ ಪರಿಗಣಿಸದೆ ಹೋದರೂ ಪಾಟೀಲರೇನೂ ತಲೆಕೆಡಿಸಿಕೊಂಡವರಲ್ಲ. ಮಕ್ಕಳಿಗಾಗಿ ಬರೆಯುವುದು ಅವರ ಪಾಲಿಗೆ ವ್ರತವಿದ್ದಂತೆ.

ಕನ್ನಡ ಸಿನಿಮಾ ಸಂದರ್ಭದಲ್ಲಿ, ವ್ಯಾಪಾರಕ್ಕೂ ಮಿಗಿಲಾಗಿ ಕಲೆಯನ್ನು ಶೋಧಿಸಬಯಸುವ ಯುವ ನಿರ್ದೇಶಕರಿಗೆ ಗಿರೀಶ ಕಾಸರವಳ್ಳಿ ಆಚಾರ್ಯಸಮಾನರು. ಆನಂದ ಪಾಟೀಲರನ್ನು ಮಕ್ಕಳ ಸಾಹಿತ್ಯದ ಕಾಸರವಳ್ಳಿ ಎನ್ನಬಹುದು. ಪಾಟೀಲರು ಮಕ್ಕಳಿಗಾಗಿ ತಾವು ಬರೆದುದಷ್ಟೇ ಅಲ್ಲ; ಮಕ್ಕಳಿಗಾಗಿ ಬರೆಯುವವರನ್ನು ಗುರ್ತಿಸಿ ಬೆನ್ನುತಟ್ಟುವವರೂ ಹೌದು. ಸಮಕಾಲೀನ ಕನ್ನಡ ಮಕ್ಕಳ ಲೇಖಕರಿಗೆ ಅವರು ದ್ರೋಣಾಚಾರ್ಯರಿದ್ದಂತೆ. ಆದರೆ, ಅವರು ಯಾರ ಹೆಬ್ಬೆರಳನ್ನೂ ಪಡೆದವರಲ್ಲ; ಪ್ರೀತಿ ನೀಡುವುದಷ್ಟೇ ಅವರಿಗೆ ಗೊತ್ತು. ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಕ್ರಿಯವಾಗಿರುವ ಸಂಘಟನೆಗಳೊಂದಿಗೆ ಅವರದು ಅಂತರ್ಜಲದ ಸಂಬಂಧ.

ಮಕ್ಕಳ ಸಾಹಿತ್ಯದ ಮಟ್ಟಿಗೆ ಅವರು ವಿಶ್ವಕೋಶವೂ ಹೌದು. ಕನ್ನಡ ಮಾತ್ರವಲ್ಲ, ಭಾರತೀಯ ಭಾಷೆಗಳು ಹಾಗೂ ಇಂಗ್ಲಿಷ್‌ನಲ್ಲಿನ ಮಕ್ಕಳ ಸಾಹಿತ್ಯ ಚಟುವಟಿಕೆಗಳ ಬಗ್ಗೆಯೂ ಅವರು ಬಿಡುಗಣ್ಣು. ಮಕ್ಕಳ ಸಾಹಿತ್ಯದಲ್ಲಿ ಎಲ್ಲೆಲ್ಲಿ ಏನೇನಾಗುತ್ತಿದೆ ಎನ್ನುವ ಮಾಹಿತಿ ಅವರಲ್ಲಿ ಲಭ್ಯ. ●